KARNATAKA LOKAYUKTA

No:UPLOK-2/DE/149/2022/ARE-9

M.S.Building,
Bengaluru-560001.
Date: 17.5.2024

# ENQUIRY REPORT

:PRESENT:

SHUBHAVEER.B.
Additional Registrar of Enquiries-9,
Karnataka Lokayukta, Bengaluru.

Sub: Departmental enquiry against (1) Sri.J.Shivaprakash, Samudaya Sanghatanadhikari, City Municipal Council, Kolar; (2) Sri. Nazeer Ahammed, the then Manager, City Municipal Council, Kolar and (3) Sri. K.Venkataramana, the then Second Division Assistant, City Municipal Council, Kolar -reg.

Ref: 1) G.O.No. UDD 35 DMK 2017, Bengaluru, dated 4.3.2022 and Corrigendum, dated 28.6.2022.

2) Nomination order No. UPLOK-2/DE/149/2022 dated: 5.7.2022, of Hon'ble Upalokayukta-2 Bengaluru.

* * *

This departmental enquiry is initiated against the above shown (1) Sri.J.Shivaprakash, (2) Sri. Nazeer Ahammed, and (3) Sri. K.Venkataramana, (hereinafter referred to as Delinquent Government Official, for short, DGOs- 1 to 3 respectively).

9-17-5

2. In pursuance of the Government Order cited above, at reference No.s 1, Hon'ble Upalokayukta, vide-order, dated 5.7.2022, cited above at reference No.2, has nominated Additional Registrar of Enquiries-9 (for short, ARE-9) to frame the charges and to conduct enquiry against the aforesaid DGO.s- 1 to 3.

3. The ARE-9 issued the articles of charge to the DGO.s- 1 to 3, enclosing the statement of imputations of misconduct, list of witnesses proposed to be examined and list of documents proposed to be relied, in support of charges and called them to appear before ARE-9.

4. The articles of charge issued by ARE-9 against the DGO.s 1 to 3 is as shown infra:

ANNEXURE-1
CHARGE

1 ರಿಂದ 3ನೇ ಆಸನೌ ಆದ ನೀವು –

1) 2007–08, 2008–09, 2009–10ನೇ ಸಾಲಿನ ಅನುಮೋದಿತ ಕ್ರಿಯಾ ಯೋಜನೆಯಂತೆ ದಿ. 22.02.2010ರ ಸರಬರಾಜು ಆದೇಶದ ಮೇರೆಗೆ M/s. HERTZ Computer & NETWORKS, BANGALORE ಇವರಿಂದ 38 ಗಣಕಯಂತ್ರ ಹಾಗೂ ಅದಕ್ಕೆ ಸಂಬಂಧಿಸಿದ ಪರಿಕರಗಳನ್ನು ಖರೀದಿಸುವಾಗ ಕೆ.ಟಿ.ಪಿ.ಪಿ. ಕಾಯ್ದೆಯಲ್ಲಿ ಹೇಳಿದ ನಿಯಮಗಳನ್ನು ಪಾಲಿಸದೆ ಹಾಗೂ ಸರ್ಕಾರಿ ಆದೇಶ PWD/513/FC-iii-2001 ದಿ. 29.10.2001ರ ಆದೇಶವನ್ನು ಉಲಂಘಿಸಿ, ಖರೀದಿ ನಿಯಮಗಳನ್ನು ಪಾಲಿಸದೇ ಖರೀದಿಸಿದಲ್ಲದೇ ಕಛೇರಿ ಕೈಪಿಡಿ ನಿಯಮ 18 ಮತ್ತು 21ನ್ನು ಪಾಲಿಸದೇ ಕರ್ತವ್ಯಲೋಪವೆಸಗಿರುತ್ತೀರಿ.

2) ಮೇಲೆ ಹೇಳಿದ ಕಂಪ್ಯೂಟರ್ ಖರೀದಿ ಮಾಡುವ ಸಲುವಾಗಿ ಹಣ ಪಾವತಿ ಮಾಡುವಾಗ ರೂ.63,270/- ಗಳನ್ನು ಹೆಚ್ಚುವರಿ ಮಾಡಿ ಸಾಮೂಹಿಕ ಜವಾಬ್ದಾರರಾಗಿರುತ್ತೀರಿ.

3) 1 ರಿಂದ 3ನೇ ಆಸನೌ- ಆದ ನೀವು 2007-08ನೇ ಸಾಲಿನ ಎಸ್.ಎಫ್.ಸಿ ಯೋಜನೆ ಅಡಿಯಲ್ಲಿ ಶೇ. 18ರ ಮೀಸಲಾತಿಯಂತ ISI/ISO Mark ಪ್ಯಾಷನ್ ಮೇಕರ್ ಹೊಲಿಗೆಯಂತ್ರಗಳನ್ನು ಸನ್‌ರೈಸ್ ಎಂಟರ್‌ಪ್ರೈಸಸ್ ಮತ್ತು ಸ್ವರ್ಣ ಇಂಡಸ್ಟ್ರೀಸ್ ಟಮಕ ಇವರಿಂದ ಖರೀದಿ ಮಾಡುವಾಗ ಖರೀದಿ ನಿಯಮಗಳನ್ನು ಪಾಲನೇ ಮಾಡದೆ ಮತ್ತು ಕಛೇರಿ ಕೈಪಿಡಿ ನಿಯಮ 18 ಮತ್ತು 21ನ್ನು ಪಾಲಿಸದೇ ಕರ್ತವ್ಯಲೋಪವೆಸಗಿರುತ್ತೀರಿ.

ಆದ್ದರಿಂದ, ನೀವು ಕರ್ತವ್ಯಲೋಪವೆಸಗಿ ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (i) ರಿಂದ (iii) ರಡಿಯಲ್ಲಿ ದುರ್ನಡತೆಯನ್ನೆಸಗಿದ್ದೀರಿ.

ಅನುಬಂಧ-2
ದೋಷಾರೋಪಣೆ ವಿವರ

ಶ್ರೀ. ಕೆ.ವಿ.ಮಂಜುನಾಥ - ತಂದೆ ಲೇಟ್ ವೆಂಕಟೇಶ್ ನಂ.346, 1ನೇ ಮುಖ್ಯರಸ್ತೆ, 13ನೇ ಕ್ರಾಸ್, ಗಾಂಧಿನಗರ, ಕೋಲಾರ (ಇನ್ನು ಮುಂದು ದೂರುದಾರರು ಎಂದು ಕರೆಯಲ್ಪಡುವ) ರವರು ಶ್ರೀ. ರಾಮದಾಸ, ಪೌರಾಯುಕ್ತರು, ಶ್ರೀ. ಮದುಸೂದನ್, ಅಧ್ಯಕ್ಷರು, ಶ್ರೀ. ವಿ.ಕೆ. ರಾಜೇಶ್, ಉಪಾಧ್ಯಕ್ಷರು, ಶ್ರೀ. ರೋಹಿತ್ ಶಂಕರಪ್ಪ, ಸ್ಥಾಯಿ ಸಮಿತಿ ಅಧ್ಯಕ್ಷರು, ಶ್ರೀ. ಲಾಲ್ ಬಹದ್ದೂರು ಶಾಸ್ತ್ರಿ, ಸ್ಥಾಯಿ ಸಮಿತಿ ಸದಸ್ಯರು, ಶ್ರೀ. ರಮೇಶ್ ಸದಸ್ಯರು, ಶ್ರೀಮತಿ. ಜ್ಯೋತಿ, ಸದಸ್ಯರು ಮತ್ತು ಶ್ರೀಮತಿ. ಕಾಂತಮ್ಮ ಸದಸ್ಯರು, ನಗರಸಭೆ, ಕೋಲಾರ ರವರುಗಳ ವಿರುದ್ಧ ದೂರನ್ನು ದಾಖಲಿಸಿ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 9 ರಡಿಯಲ್ಲಿ ತನಿಖೆ ಕೈಗೊಳ್ಳಲಾಯಿತು.

ದೂರನ್ನು ತನಿಖೆಗಾಗಿ ಈ ಸಂಸ್ಥೆಯ ತಾಂತ್ರಿಕ ಹಾಗೂ ಲೆಕ್ಕಪರಿಶೋದನಾ ವಿಭಾಗದ ಮುಖ್ಯ ಅಭಿಯಂತತವರಿಗೆ ವಹಿಸಿಕೊಡಲಾಗಿತ್ತು. ಮುಖ್ಯ ಅಭಿಯಂತರರು ದೂರಿನ ತನಿಖೆಯನ್ನು ಲೆಕ್ಕಾಧೀಕ್ಷಕರು 1 ಶ್ರೀ.ಆರ್.ನಾರಾಯಣ್ ರಾವ್ ರವರಿಗೆ ವಹಿಸಿಕೊಡಲಾಗಿ, ತನಿಖಾಧಿಕಾರಿಯವರು ತನಿಖೆಯ ಸಮಯದಲ್ಲಿ ಈ ಮೊದಲು ಎದುರುದಾರೆಂದು ನಮೂದಿಸಲ್ಪಟ್ಟ ಎಲ್ಲಾ ಎಂಟು ಜನ ಅಧಿಕಾರಿ ವರ್ಗ ಹಾಗೂ ಚುನಾಯಿತಿ ಪ್ರತಿನಿಧಿಗಳ ಲಿಖಿತ ಸಮಜಾಯಿಷಿಯನ್ನು ಪಡೆದುಕೊಂಡು ತನಿಖಾ ವರದಿಯನ್ನು ಸಲ್ಲಿಸಿರುತ್ತಾರೆ.

ತನಿಖಾಧಿಕಾರಿಯವರ ತನಿಖಾ ವರದಿಯನ್ನು ಪರಿಶೀಲಿಸಲಾಗಿ ಕೆಳಕಂಡ ಅಂಶಗಳು ಸ್ಪಷ್ಟವಾಗಿರುತ್ತವೆ.

A. 2007-08, 2008-09, 2009-10ನೇ ಸಾಲಿನ ಅನುಮೋದಿತ ಕ್ರಿಯಾ ಯೋಜನೆಯಂತೆ ದಿ. 22.02.2010ರ ಸರಬರಾಜು ಆದೇಶದ ಮೇರೆಗೆ ಖರೀದಿ ಮಾಡಿದ 38 ಗಣಕಯಂತ್ರ ಹಾಗೂ ಅದಕ್ಕೆ ಸಂಬಂಧಿಸಿದ ಪರಿಕರಗಳ ಖರೀದಿಯಲ್ಲಿ ಆದ ಅವ್ಯವಹಾರಕ್ಕೆ ಸಂಬಂಧಿಸಿದಂತೆ:-

ರಾಮದಾಸ್, ಆಯುಕ್ತರು, ಮಧುಸುಧನ್ ಮತ್ತು ಆಸನೌ 1 ರಿಂದ 3 ಕ್ರಮವಾಗಿ ಕೋಲಾರ ನಗರಸಭೆಯಲ್ಲಿ ನಗರಸಭೆ ಆಯುಕ್ತರಾಗಿ, ಅಧ್ಯಕ್ಷರೆಂದು, ಸಮುದಾಯ ಸಂಘಟಣಾಧಿಕಾರಿಗಳೆಂದು, ವ್ಯವಸ್ಥಾಪಕರೆಂದು ಹಾಗೂ 2ನೇ ದರ್ಜೆ ಸಹಾಯಕರೆಂದು ಕಾರ್ಯನಿರ್ವಹಿಸುತ್ತಿದ್ದಾಗ ಕೋಲಾರ ನಗರಸಭೆ ವತಿಯಿಂದ 2007-08, 2008-09, 2009-10ನೇ ಸಾಲಿನ ಅನುಮೋದಿತ ಕ್ರಿಯಾ ಯೋಜನೆಯಂತೆ ದಿ. 22.02.2010ರ ಸರಬರಾಜು ಆದೇಶದ ಮೇರೆಗೆ ಖರೀದಿಗೆ ಸಂಬಂಧಿಸಿದಂತೆ ಕೋಲಾರ ನಗರ ಸಭೆ ವತಿಯಿಂದ ದಿ. 22.02.2010ರಂದು M/s. HERTZ Computer & NETWORKS, BANGALORE ಇವರಿಗೆ D.G.S & D Rate Contract ರಲ್ಲಿನ ವಿಶಿಷ್ಟ ವಿವರಣೆಯಂತೆ ಕಂಪ್ಯೂಟರ್‌ಗಳನ್ನು ಸರಬರಾಜು ಮಾಡಲು ಕಾರ್ಯಾದೇಶ

ನೀಡಿ ಸದರಿ ಸಂಸ್ಥೆ ದಿ. 20.03.2010ರ ಬಿಲ್ ನಂ. 192ರ ಮೂಲಕ 38 ಗಣಕ ಯಂತ್ರಗಳನ್ನು ಸರಬರಾಜು ಮಾಡಿದ ಮೇರೆಗೆ ದಿ. 19.04.2010ರಂದು ರೂ. 28,95,942/-ಗಳನ್ನು ಪಾವತಿ ಮಾಡಿದ ವ್ಯವಹಾರದಲ್ಲಿ ಈ ಕೆಳಗೆ ಹೇಳಿದ ಅವ್ಯವಹಾರಗಳಿಗೆ ಸಾಮೂಹಿಕವಾಗಿ ಕಾರಣರಾಗಿರುತ್ತಾರೆ.

(i) ಸದರಿ ಗಣಕ ಯಂತ್ರಗಳನ್ನು ಖರೀದಿಸುವ ವ್ಯವಹಾರದಲ್ಲಿ ಕೋಲಾರ ನಗರ ಸಭೆಯ ಆಯುಕ್ತರು ಹಾಗೂ ಸಿಬ್ಬಂದಿ ವರ್ಗ ಕೆ.ಟಿ.ಪಿ.ಪಿ. ಕಾಯ್ದೆಯಲ್ಲಿ ಹೇಳಿದ ನಿಯಮಗಳನ್ನು ಪಾಲಿಸದೆ ಹಾಗೂ ಸರ್ಕಾರಿ ಆದೇಶಿ PWD/513/FC-iii-2001 ದಿ. 29.10.2001ರ ಆದೇಶವನ್ನು ಉಲಂಘಿಸಿ ಯಾವುದೇ ಟೆಂಡರ್ ಕರೆಯದೇ ರೂ. ಒಂದು ಲಕ್ಷಕ್ಕಿಂತ ಮಿಗಿಲಾದ ಮೊತ್ತದ ಬೆಲೆಯ 38 ಕಂಪ್ಯೂಟರ್‌ಗಳನ್ನು M/s. HERTZ Computer & NETWORKS, BANGALORE ರವರಿಂದ ಖರೀದಿ ಮಾಡಲಾಗಿದೆ.

(ii) ಸದರಿ ಗಣಕಯಂತ್ರಗಳನ್ನು ಸದರಿ ಸಂಸ್ಥೆಯಿಂದ ನೇರವಾಗಿ ಸರಬರಾಜು ಮಾಡಲು ಆದೇಶ ನೀಡುವುದರ ಮೂಲಕ 31.12.2011ರವರೆಗೆ ಜಾರಿಯಲ್ಲಿದ್ದ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ/30/ಪಿ.ಮಾ.ಆ/2008 ದಿ. 03/10/2009ರ ಆದೇಶಕ್ಕೆ ಲಗತ್ತಿಸಿದ ಅನುಬಂಧದಲ್ಲಿ ಸೂಚಿಸಿದ ಅನುಮೋದಿತ 13 ಸಂಸ್ಥೆಗಳಿಂದ ಟೆಂಡರ್‌ಗಳನ್ನು ಕರೆಯದೇ ನೇರವಾಗಿ ಸರಬರಾಜು ಅದೇಶ ನೀಡಿ 28,95,942/-ರೂಪಾಯಿಗಳ ಬೃಹತ್ ಮೊತ್ತದ 38 ಕಂಪ್ಯೂಟರ್‌ಗಳನ್ನು ಖರೀದಿ ಮಾಡಲಾಗಿದೆ.

(iii) ಸರಬರಾಜು ಆದೇಶದ ಕ್ರಮ ಸಂಖ್ಯೆ 60ರಲ್ಲಿ 16,872/- ಬೆಲೆಯ 38 ಎಂ.ಎಸ್.ಆಫೀಸ್ 2007 ಪ್ರೊಫೆಷನ್‌ಲ್ ಎಂ.ಓ. ಎಲ್.ಪಿ ವಿತ್ ಮೀಡಿಯಾ (ನಾನ್ ಅಕೆಡಮಿಕ್) ಎನ್ನುವ ವಿಶಿಷ್ಟವಾದ ಸಾಮಗ್ರಿಯನ್ನು ಸರಬರಾಜು ಮಾಡುವ ಅಧೇಶವಿದ್ದರೂ ಸಹ ಸರಬರಾಜು ದಾರರ ದಿ. 20.03.2010 ಬಿಲ್ ನಂ. 192ರಲ್ಲಿ 15,207/- ರೂಪಾಯಿಗಳ ಮುಖಬೆಲೆಯ 38 ಎಂ.ಎಸ್.ಆಫೀಸ್ 2007 ಪ್ರೊಫೆಷನ್‌ಲ್ ಎಂ.ಓ. ಎಲ್.ಪಿ ವಿತ್‌ಔಟ್ ಮೀಡಿಯಾ (ನಾನ್ ಅಕೆಡಮಿಕ್)

ಸಾಮಗ್ರಿಗಳನ್ನು ಪಡೆದುಕೊಂಡು ಒಟ್ಟು 38 ಉಪಕರಣಗಳಿಗೆ ಒಟ್ಟಾರೆಯಾಗಿ 63,270/–ರೂಪಾಯಿಗಳನ್ನು ಹೆಚ್ಚುವರಿಯಾಗಿ ಪಾವತಿ ಮಾಡಲಾಗಿದೆ.

(iv) **M/s.** HERTZ Computer & NETWORKS, BANGALORE ಇವರು ಕಂಪ್ಯೂಟರ್‌ಗಳನ್ನು ಸರಬರಾಜು ಮಾಡುವ ಅಧಿಕೃತ ಮಾರಾಟಗಾರರು ಇರದೇ ಇದ್ದರೂ ಸಹ ಹಾಗೂ ಕಂಪ್ಯೂಟರ್‌ಗಳನ್ನು ಡಿ.ಜಿ.ಎಸ್ & ಡಿ. ರೇಟ್ ಕಾಂಟ್ರ್ಯಾಕ್ಟ್ ಹೊಂದಿದ ಲೆನೆವೋ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಗುರುಗಾಂ ಸಂಸ್ಥೆಯು ದಿ. 17/02/2009 ರಿಂದ 28/02/2010ರವರೆಗೆ ವ್ಯಾಲಿಡಿಟಿ ಹೊಂದಿದ್ದು, ಸದರಿ ಸಂಸ್ಥೆಯ ಅಧಿಕೃತ ಮಾರಾಟಗಾರರು ಎಂದು. M/s. HERTZ Computer & NETWORKS, BANGALORE ಇವರಿಗೆ ಕಂಪ್ಯೂಟರ್‌ಗಳನ್ನು ಖರೀದಿಸಲು ದಿ. 22/02/2010ರಂದು ಕಾರ್ಯಾದೇಶ ನೀಡಿದ್ದು, ಸದರಿ ಸಂಸ್ಥೆಯು ಲೆನೆವೋ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ಅಧೀಕೃತ ಮಾರಾಟಗಾರರಾಗಿರುವುದಿಲ್ಲ ಆದರೆ, ಸದರ ಸಂಸ್ಥೆಯಿಂದ ಕಂಪ್ಯೂಟರ್‌ಗಳನ್ನು ಖರೀದಿಸಿರುವುದು ತನಿಖೆಯಲ್ಲಿ ಕಂಡುಬಂದಿದೆ.

(v) ಆಸನೌ–3 ಆದ ವಿಷಯ ನಿರ್ವಾಹಕರು ಕಡತದ ಟಿಪ್ಪಣಿಯ ಕಂಡಿಕೆ–(9)ರಲ್ಲಿ ಬಿಲ್ ನಂಬರ್ 192/20/03/2010 ಪ್ರಕಾರ ಕಾರ್ಯಾಲಕ್ಕೆ ಕಂಪ್ಯೂಟರ್‌ಗಳನ್ನು ಸರಬರಾಜು ಮಾಡಿರುತ್ತಾರೆ ಹಾಗೂ ಮೆ: ಸಿ.ಬೈರೇಗೌಡ, ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಕೋಲಾರ ಇವರು ಮೂರನೇ ಪಾರ್ಟಿ ತಪಾಸಣಾ ವರದಿಯನ್ನು ನೀಡಿರುತ್ತಾರೆ. ಆದ್ದರಿಂದ M/s HERTZ COMPUTER & NETWORK'S ಬೆಂಗಳೂರು ಇವರಿಗೆ ಹಣ ಪಾವತಿಸುವಂತೆ ಕೋರಿರುವುದಾಗಿ ತಿಳಿಸಿರುತ್ತಾರೆ. ಈ ರೀತಿ ಮಂಡಿಸಿರುವ ಟಿಪ್ಪಣಿಯನ್ನು ಕಛೇರಿಯ ಆಸನೌ–3 ಆದ ವ್ಯವಸ್ಥಾಪಕರು ಕಂಡಿಕೆ(10)ರಲ್ಲಿ ಕಡತವನ್ನು ಅನುಮೋದಿಸಲು ಸಲ್ಲಿಸಿದ್ದು, ಕಂಡಿಕೆ (11)ರಲ್ಲಿ ಪೌರಾಯುಕ್ತರು ಹಾಗೂ ಕಂಡಿಕೆ(12)ರಲ್ಲಿ ಅಧ್ಯಕ್ಷರು ಅನುಮೋದಿಸಿರುತ್ತಾರೆ. ಈ ರೀತಿ ಟಿಪ್ಪಣಿಯನ್ನು ಮಂಡಿಸುವ ಪೂರ್ವದಲ್ಲಿ ಬಿಲ್ಲಿನೊಂದಿಗೆ ಹಾಗೂ ಸರಬರಾಜು

ಆದೇಶದಲ್ಲಿ ನೀಡಿರುವ specification ನೊಂದಿಗೆ ತಾಳೆ ಮಾಡಿ, ಸರಬರಾಜು ಮಾಡಿರುವ ಕಂಪ್ಯೂಟರ್‌ಗಳು ಸರಬರಾಜು ಆದೇಶದಲ್ಲಿ ತಿಳಿಸಿರುವಂತೆ ಸರಬರಾಜು ಮಾಡಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳದೇ ಹಣ ಪಾವತಿಸಿರುತ್ತಾರೆ.

B. 2007-08ನೇ ಸಾಲಿನ ಎಸ್.ಎಫ್.ಸಿ ಯೋಜನೆ ಅಡಿಯಲ್ಲಿ ಶೇ. 18ರ ಮೀಸಲಾತಿಯಂತ ಫ್ಯಾಷನ್ ಮೇಕರ್ ಹೊಲಿಗೆಯಂತ್ರಗಳ ಖರೀದಿ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಎದುರುದಾರ 1, 2, 9 ರಿಂದ 11 ರವರು ಈ ಕೆಳಗೆ ಹೇಳಿದ ಅವ್ಯವಹಾರಗಳಿಗೆ ಕಾರಣರಾಗಿರುತ್ತಾರೆ.

(i) ಪೌರಾಯುಕ್ತರು, ನಗರಸಭೆ, ಕೋಲಾರ ಇವರು ಟೆಂಡರ್ ಪ್ರಕಟಣೆಯಲ್ಲಿ ISI/ISO Mark ವುಳ್ಳ ಫ್ಯಾಷನ್ ಮೇಕರ್ ಹೊಲಿಗೆ ಯಂತ್ರಗಳನ್ನು ಸರಬರಾಜು ಮಾಡುವಂತೆ ಟೆಂಡರ್ ಕರೆಯಲಾಗಿದ್ದು, ಪೂರೈಕೆ ಆದೇಶವನ್ನು ದಿನಾಂಕ: 11/03/2010ರಂದು ನೀಡಲಾಗಿದೆ. ಈ ಪೂರೈಕೆ ಆದೇಶದಲ್ಲಿ ತಿಳಿಸಿರುವ ಸಾಮಾಗ್ರಿಗಳನ್ನು ಪೂರೈಸಿದ ಬಗ್ಗೆ ಬಿಲ್ಲಿನಲ್ಲಿ ವಿವರಗಳನ್ನು ನಮೂದಿಸಿರುವುದಿಲ್ಲ. ಆದ್ದರಿಂದ ಯಾವ ಮಾದರಿ ಹೊಲಿಗೆ ಯಂತ್ರಗಳನ್ನು (specification) ಪೂರೈಸಲಾಗಿದೆ ಎಂಬುದು ಸ್ಪಷ್ಟವಿರುವುದಿಲ್ಲ. ಪೂರೈಕೆ ಆದೇಶದಂತೆ ಸಾಮಾಗ್ರಿಗಳನ್ನು ಪಡೆಯದೇ ಕರ್ತವ್ಯಲೋಪವೆಸಗಿರುವುದು ಕಂಡುಬಂದಿದೆ.

(ii) ದಿನಾಂಕ: 10/12/2009 ರಂದು ಉಷಾ ಅಲ್ಲೂರು ಹೊಲಿಗೆ ಯಂತ್ರಗಳನ್ನು ಸರಬರಾಜು ಮಾಡಲು ಟೆಂಡರ್ ಪ್ರಕಟಣೆ ಹೊರಡಿಸಿದ್ದು, ಆದರೆ ದಿನಾಂಕ: 11/03/2010 ರಂದು 95 ಉಷಾ ಕಂಪನಿ ಫ್ಯಾಷನ್ ಮೇಕರ್ ಹೊಲಿಗೆ ಯಂತ್ರಗಳನ್ನು ಸರಬರಾಜು ಮಾಡಲು ಪಊರೈಕೆ ಆದೇಶವನ್ನು ನೀಡಲಾಗಿದೆ. ಈ ಪೂರೈಕೆ ಆದೇಶದಲ್ಲಿ ತಿಳಿಸಿರುವ ಸಾಮಾಗ್ರಿಗಳನ್ನು ಪೂರೈಸಿದ ಬಗ್ಗೆ ಬಿಲ್ಲಿನಲ್ಲಿ ವಿವರಗಳನ್ನು ನಮೂದಿಸಿರುವುದಿಲ್ಲ. ಆದ್ದರಿಂದ ಯಾವ ಮಾದರಿ ಹೊಲಿಗೆ ಯಂತ್ರಗಳನ್ನು (specification) ಪೂರೈಸಲಾಗಿದೆ ಎಂಬುದು ಸ್ಪಷ್ಟವಿರುವುದಿಲ್ಲ. ಪೂರೈಕೆ

4-1715

ಆವಶ್ಯಕತೆ ಸಾಮಾಗ್ರಿಗಳನ್ನು ಪಡೆಯದೇ ಕರ್ತವ್ಯಲೋಪವೆಸಗಿರುವುದು ಕಂಡುಬಂದಿದೆ.

(iii) ಕಛೇರಿ ಟಿಪ್ಪಣಿಯ ಕಂಡಿಕೆ (21)ರಲ್ಲಿ ಆಸನೌ–3–ವಿಷಯ ನಿರ್ವಾಹಕರು ಸನ್‌ರೈಸ್ ಎಂಟರ್‌ಪ್ರೈಸಸ್ ಇವರು 95 ಹೊಲಿಗೆ ಯಂತ್ರಗಳನ್ನು ಸರಬರಾಜು ಮಾಡಿದ ಬಾಬ್ತು ಬಿಲ್ ನಂ.480/21/04/2010ರಲ್ಲಿ ಬಿಲ್ ನೀಡಿರುತ್ತಾರೆ. ಸದರಿ ಬಿಲ್ಲಿನ ಬಾಬ್ತು ರೂ.9,92,750/– ಗಳನ್ನು ಪಾವತಿಸಲು ಕೋರಿರುವುದಾಗಿ ಕಡತವನ್ನು ಆದೇಶಕ್ಕಾಗಿ ದಿನಾಂಕ: 26/04/2010ರಂದು ಮಂಡಿಸಿರುತ್ತಾರೆ. ಕಂಡಿಕೆ (31)ರಲ್ಲಿ ಪೌರಾಯುಕ್ತರು ಹಾಗೂ ಕಂಡಿಕೆ (32)ರಲ್ಲಿ ಅಧ್ಯಕ್ಷರು ಅನುಮೋದಿಸಿರುತ್ತಾರೆ.

(iv) ಕಛೇರಿ ಟಿಪ್ಪಣಿಯ ಕಂಡಿಕೆ (19)ರಲ್ಲಿ ಆಸನೌ–3–ವಿಷಯ ನಿರ್ವಾಹಕರು ಸ್ವರ್ಣ ಇಂಡಸ್ಟ್ರೀಸ್ ಟಮಕ ಇವರು 95 ಹೊಲಿಗೆ ಯಂತ್ರಗಳನ್ನು ಸರಬರಾಜು ಮಾಡಿದ ಬಾಬ್ತು ಬಿಲ್ ನಂ.12/30/03/2010ರಲ್ಲಿ ಬಿಲ್ ನೀಡಿರುತ್ತಾರೆ. ಸದರಿ ಬಿಲ್ಲಿನ ಬಾಬ್ತು ರೂ.9,92,750/– ಗಳನ್ನು ಪಾವತಿಸಲು ಕೋರಿರುವುದಾಗಿ ಕಡತವನ್ನು ಆದೇಶಕ್ಕಾಗಿ ದಿನಾಂಕ: 12/04/2010ರಂದು ಮಂಡಿಸಿರುತ್ತಾರೆ. ಕಂಡಿಕೆ (20)ರಲ್ಲಿ ಆಸನೌ2–ಕಛೇರಿ ವ್ಯವಸ್ಥಾಪಕರು ಶಿಫಾರಸ್ಸು ಮಾಡಿರುತ್ತಾರೆ. ಪೌರಾಯುಕ್ತ ಕಂಡಿಕೆ (21)ರಲ್ಲಿ ಹಾಗೂ ಕಂಡಿಕೆ (22)ರಲ್ಲಿ ಅಧ್ಯಕ್ಷರು ಅನುಮೋದಿಸಿರುತ್ತಾರೆ.

ತನಿಖಾಧಿಕಾರಿಗಳು ತಮ್ಮ ತನಿಖಾ ವರದಿಯಲ್ಲಿ ಗಮನಿಸಿದ ಲೋಪದೋಶಗಳಿಗೆ ಈ ಕೆಳಗಿನ ಅಧಿಕಾರಿ/ಸಿಬ್ಬಂದಿ ಹಾಗೂ ನಗರ ಸಭೆಯ ಹಿಂದಿನ ಅಧ್ಯಕ್ಷರು ಜವಾಬ್ದಾರರೆಂದು ಅಭಿಪ್ರಾಯ ಪಟ್ಟಿದ್ದಾರೆ.

| ಕ್ರ.ಸಂ. | ಅಧಿಕಾರಿ ನೌಕರರ ವಿವರ |
|---|---|
| 1 | ಶ್ರೀ ಜಿ.ರಾಮದಾಸ್– ಹಿಂದಿನ ಪೌರಾಯುಕ್ತರು, ನಗರಸಭೆ, ಕೋಲಾರ. ಪ್ರಸ್ತುತ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಕಲಬುರಗಿ |
| 2 | ಶ್ರೀ ಜಿ.ಶಿವಪ್ರಕಾಶ್, ಸಮುದಾಯ ಸಂಘನಾಧಿಕಾರಿ, ನಗರಸಭೆ, ಕೋಲಾರ |

| | |
|---|---|
| 3 | ಶ್ರೀ ನಜೀರ್ ಅಹ್ಮದ್– ಹಿಂದಿನ ಮ್ಯಾನೇಜರ್, ನಗರಸಭೆ, ಕೋಲಾರ, ಪ್ರಸ್ತುತ ಜಿಲ್ಲಾ ನಗರಾಭಿವೃದ್ಧಿ ಕೋಶ, ಕೋಲಾರ |
| 4 | ಶ್ರೀ ಮಧುಸೂದನ್ – ಹಿಂದಿನ ಅಧ್ಯಕ್ಷರು, ನಗರಸಭೆ, ಕೋಲಾರ |
| 5 | ಶ್ರೀ ವಿ.ಕೆ.ರಾಜೇಶ್ – ಹಿಂದಿನ ಅಧ್ಯಕ್ಷರು, ನಗರಸಭೆ, ಕೋಲಾರ |
| 6 | ಶ್ರೀ. ಕೆ.ವೆಂಕಟರಮಣ – ಹಿಂದಿನ ದ್ವಿ.ದ.ಸ, ನಗರಸಭೆ, ಕೋಲಾರ ಪ್ರಸ್ತುತ ಯೋಜನಾ ನಿರ್ದೇಶಕರ ಕಛೇರಿ, ಕೋಲಾರ. |

ಮೇಲೆ ಹೇಳಿದ 6 ಜನರಲ್ಲಿ, ಆಸನೌ–1–ಶ್ರೀ. ಜೆ.ಶಿವಪ್ರಕಾಶ್, ಆಸನೌ–2– ಶ್ರೀ. ನಜೀರ್ ಅಹಮದ್ ಹಾಗೂ ಆಸನೌ–3–ಶ್ರೀ.ಕೆ.ವೆಂಕಟರಮಣ ಈ ಮೊದಲು ಎದುರುದಾರರಾಗಿರದೇ ಇದ್ದ ಕಾರಣ ಅವರುಗಳನ್ನು ಕ್ರಮವಾಗಿ ಎದುರುದಾರ ನಂ.9 ರಿಂದ 11 ಎಂದು ಸೇರ್ಪಡೆ ಮಾಡಲಾಯಿತು. ತನಿಖಾ ವರದಿಯಲ್ಲಿ ಮೇಲ್ನೋಟಕ್ಕೆ ಕಂಡುಬಂದ ಆಪಾದನೆಗಳಿಗೆ ಜವಾಬ್ದಾರರು ಎನ್ನಲಾದ ಶ್ರೀ ಜಿ. ರಾಮದಾಸ್, ಹಿಂದಿನ ಪೌರಾಯುಕ್ತರು, ಶ್ರೀ ಮಧುಸುಧನ್, ಹಿಂದಿನ ಅಧ್ಯಕ್ಷರು, ಮತ್ತು ವಿ. ಕೆ. ರಾಜೇಶ್, ಹಿಂದಿನ ನಗರ ಸಭೆ ಅಧ್ಯಕ್ಷರು ಹಾಗೂ ಆಸನೌ–1 ರಿಂದ 3 ರರವರೆಗೆ ತನಿಖಾ ವರದಿಯ ಪ್ರತಿಗಳನ್ನು ಕಳುಹಿಸಿ ಅವರುಗಳ ಉತ್ತರವನ್ನು ಕೇಳಲಾಗಿ ಶ್ರೀ ಮಧುಸುಧನ್, ಹಿಂದಿನ ಅಧ್ಯಕ್ಷರು, ಮತ್ತು ವಿ. ಕೆ. ರಾಜೇಶ್, ಹಿಂದಿನ ನಗರ ಸಭೆ ಅಧ್ಯಕ್ಷರು ಹಾಗೂ ಆಸನೌ–1 ರಿಂದ 3 ರವರು ತಮ್ಮ ಉತ್ತರಗಳನ್ನು ಸಲ್ಲಿಸಿ ಆಪಾದನೆಗಳನ್ನು ನಿರಾಕರಿಸಿರುತ್ತಾರೆ.

ಶ್ರೀ ಜಿ.ರಾಮದಾಸ್, ಹಿಂದಿನ ಪೌರಾಯುಕ್ತರು, ಈಗಾಗಲೇ 31/05/2015ರಂದು ನಿವೃತ್ತಿ ಆದ ಕಾರಣ ಹಾಗೂ ಮೇಲ್ನೋಟಕ್ಕೆ ಕಂಡುಬರುವ ಆಪಾದನೆಗಳು 2009–10ನೇ ಸಾಲಿಗೆ ಸಂಬಂಧಿಸಿದ ವ್ಯವಹಾರಗಳಾದ್ದರಿಂದ ಹಾಗೂ ಶ್ರೀ ಮಧುಸುಧನ್, ಹಿಂದಿನ ಅಧ್ಯಕ್ಷರು ಮತ್ತು ವಿ. ಕೆ. ರಾಜೇಶ್, ಹಿಂದಿನ ನಗರ ಸಭೆ ಅಧ್ಯಕ್ಷರು ಈಗ ಯಾವುದೇ ಸಾರ್ವಜನಿಕ ನೌಕರರ ಹುದ್ದೆ ಹೊಂದಿಲ್ಲದೆ ಇದ್ದ ಕಾರಣ ಅವರುಗಳ ವಿರುದ್ಧ ಶಿಸ್ತು ಕ್ರಮಕ್ಕೆ ಶಿಫಾರಸ್ಸು ಮಾಡಲು ಅವಧಿ ಮೀರುವುದರಿಂದ ಟಿಪ್ಪಣಿ ಹಾಳೆಗಳಲ್ಲಿ ಮಾಡಿರುವ ಆದೇಶದಂತೆ ಸದರಿ ಅವರುಗಳ ವಿರುದ್ಧ ಯಾವುದೇ ಶಿಫಾರಸ್ಸು ಮಾಡಿರುವುದಿಲ್ಲ.

ಹೀಗಾಗಿ, ಮೇಲಿನ ಕಾರಣಗಳನ್ನು ಹಾಗೂ ಕಡತವನ್ನು ಪರಿಶೀಲಿಸಿದಾಗ ಆಸನೌ –1 ರಿಂದ 3 – ಶ್ರೀ.ಜೆ.ಶಿವಪ್ರಕಾಶ್, ಶ್ರೀ. ನಜೀರ್ ಅಹಮದ್ ಮತ್ತು ಶ್ರೀ.ಕೆ.ವೆಂಕಟರಮಣ ರವರುಗಳು ಆಪಾದನೆ ಮಾಡಲಾದ ಕಂಪ್ಯೂಟರ್ ಖರೀದಿ ವ್ಯವಹಾರ ಮತ್ತು ಫ್ಯಾಷನ್ ಮೇಕರ್ ಹೊಲಿಗೆ ಯಂತ್ರಗಳ ಖರೀದಿಯಲ್ಲಿ ನಿಯಮಗಳನ್ನು ಪಾಲನೆ ಮಾಡದೆ ಇರುವ ಬಗ್ಗೆ ಹಾಗೂ ಕಂಪ್ಯೂಟರ್ ಖರೀದಿಯ ಹಣ ಪಾವತಿ ಮಾಡುವಾಗ ರೂ.63,270/– ರೂಪಾಯಿಗಳನ್ನು ಹೆಚ್ಚುವರಿ ಪಾವತಿ ಮಾಡಲು ಸಾಮೂಹಿಕವಾಗಿ ಜವಾಬ್ದಾರರಾಗಿರುವ ಕಾರಣ ಆಸನೌ 1 ರಿಂದ 3 ರವರುಗಳು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1)(i), (ii) ಮತ್ತು (iii) ರಲ್ಲಿ ಹೇಳಿದಂತೆ ಅವ್ಯವಹಾರದ ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಈ ಮೂಲಕ ಆಸನೌ 1 ರಿಂದ 3 ರವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ಮಾಡಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ. ಮತ್ತು ಶ್ರೀ. ರಾಮದಾಸ್ ಹಾಗೂ ಶ್ರೀ. ಮಧುಸೂದನ್ ಮತ್ತು ಆಸನೌ–1 ರಿಂದ 3 ಕಂಪ್ಯೂಟರ್ ಖರೀದಿ ವ್ಯವಹಾರದಲ್ಲಿ ರೂ.63,270/– ರೂಪಾಯಿಗಳನ್ನು ಹೆಚ್ಚುವರಿಯಾಗಿ ಪಾವತಿ ಮಾಡಿರುವುದಕ್ಕೆ ಸಾಮೂಹಿಕವಾಗಿ ಜವಾಬ್ದಾರರಾದ ಕಾರಣ ಅವರುಗಳಿಂದ ಸದರಿ ಹಣವನ್ನು ಕಾನೂನು ಪ್ರಕಾರ ವಸೂಲಿ ಮಾಡುವ ಕ್ರಮ ತೆಗೆದುಕೊಳ್ಳಬೇಕೆಂದು ಸಹ ಶಿಫಾರಸ್ಸು ಮಾಡಲಾಗಿದೆ.

ಆಸನೌ 1 ರಿಂದ 3 ರವರು ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮ 3(i) ಮತ್ತು (iii) ರನ್ವಯ ಶಿಸ್ತು

ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದು, ಆಸನೌ ರವರ ಪಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲು ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14–ಎ ರಡಿಯಲ್ಲಿ ಆಸನೌ ರವರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಗೌರವಾನ್ವಿತ ಉಪಲೋಕಾಯುಕ್ತರವರು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ ಮೇರೆಗೆ ಸರ್ಕಾರವು ಮೇಲೆ ಉಲ್ಲೇಖಿಸಿದ ಆದೇಶದಲ್ಲಿ ಇಲಾಖಾ ವಿಚಾರಣೆ ನಡೆಸಲು ಅನುಮತಿ ನೀಡಿರುತ್ತದೆ. ಅದರಂತೆ, ಗೌರವಾನ್ವಿತ ಉಪಲೋಕಾಯುಕ್ತರವರು, ಅಪರ ನಿಬಂಧಕರು, ವಿಚಾರಣೆಗಳು–9 ರವರಿಗೆ ವಿಚಾರಣೆ ನಡೆಸಿ ವರದಿಯನ್ನು ಸಲ್ಲಿಸಲು ಸೂಚಿಸಿರುತ್ತಾರೆ. ಆದ್ದರಿಂದ, ಈ ದೋಷಾರೋಪಣೆ.

5. On appearance, on 21.9.2022, plea/first oral statement was recorded and DGO.s 1 and 2 did not plead guilty.

6. Even though Articles of charges was served on DGO-3 on 26.7.2022, he remained absent, hence on 29.7.2022 he was placed exparte under Rule 11 (20) of KCS (CC&A) Rules 1957.

7. Even though DGO.s -1 and 2 filed separate written statements both of them contended the very same facts. To avoid repetition (denying the charges leveled against DGO-s No.1 and 2) their contentions are that they had suggested for calling tenders, for that purpose, as per the terms of Karnataka Transparency and Public Procurement Act; to the commissioner for his perusal and necessary orders. Afterwards, the Board, as per resolution, decided to adopt the DGS and D-rate contract method for the purpose of purchasing the computers, as amount sanctioned remained unused and the Government has directed to utilize the sanctioned amount immediately. They were not the tender inviting authority, nor they had authority to place order to purchase the required

items. The scope of work of DGO-1, as Community Affairs Officer was to forward the requirements to the commissioner to issue appropriate orders. They had no role, or say, in the subject matter. They further contend that supply was as per the order/ requirement and that there was no loss caused to department. Since both the supplies were examined and investigated by the 3rd party and approved by the commissioner and received its affirmation and ratification from the council. The charges leveled against them cannot be attributed to dereliction of duty. Since orders were placed by the commissioner and technical wing of the department was the authority to monitor the orders and its supply, they have no role to play in the said purchase, or supply, as the same was beyond their job charter and they were not signatories,or authority, to place orders, or monitor supply. Hence pray to exonerate them from the charges leveled against them.

8. On behalf of the Disciplinary Authority, the complainant/ Sri.K.V.Manjunath was examined as PW-1 and Investigating Officer/ Sri. H.R.Narayana Rao was examined as PW-2. Exs P-1 to Ex.P-21 were marked

9. Second Oral statement of DGO.s 1 and 2 was recorded on 21.9.2023. DGO-1 was examined as DW-1. DGO-2 was examined as DW-2, and through them, Exs.D1 to D 7 were marked. DGO.s 1 and 2 submitted written arguments. Heard the submissions.

10. Hence, the points for consideration is:

(1) Whether the disciplinary authority proves the charges leveled against DGO No.1?

Whether the disciplinary authority proves the charges leveled against DGO No.2?

Whether the disciplinary authority proves the charges leveled against DGO No. 3 ?

11. The findings are-

Point No.1 -Negative,

Point No.2 -Negative

Point No.3 - Partly positive, for the following:

REASONS

12. PW-1, the complainant, has mainly deposed that he obtained particulars and informations from CMC, Kolar; with regard to purchase of sewing machines, computers and gym items. It was found out that they purchased the same for the value above the market rate. There was misappropriation in purchasing the said items. Hence he lodged complaint as per Ex.P-1 to Ex.P-3. In 2015, officials from Karnataka Lokayukta institution visited the said CMC and inspected the documents. The said items were not purchased following the procedures of law. The UPS, worth Rs. 3000/-, was purchased by the DGO.s for Rs. 24,500/-. When free software was available, the same was purchased at

the rate of Rs. 16000/- . The suppliers, who supplied computers, were not the authorized dealers of Lenova company.

13. PW-2, the auditor of Karnataka Lokayukta, mainly deposes that after issuing notices to the DGOs, on 12.2.2015 and 13.2.2015 he inspected the documents ETC.; in CMC, Kolar. In that regard he prepared mahazar, Ex.P-4. The mahazar, Ex.P-5, was prepared with regard to inspecting the documents and after inspecting the computers, which were distributed to the beneficiaries. The photographs taken at that time are Ex.P-6 and 7. The order of Deputy Commissioner is Ex.P-8. Violating the conditions of order of Deputy Commissioner, marked Ex.P-8; the Chief Officer placed order Ex.P-9, before M/s Hertz computers and Networks. The said M/s Hertz computers and Networks supplied computers as per Ex.P-10, which were contrary to the orders placed as per Ex.P-9. The cash bill in that regard is Ex.P-11. Hence, Rs. 62,270/- was paid in excess. The DGO.s did not follow the requirements of office hand book and DGO.s were responsible for the misdeeds. The misappropriations found out during this investigation are shown in Ex.P-4, mahazar. On 10.12.2009 tender was published as per Ex.P-13, for supply of fashion maker sewing machines with ISI /ISO marks. In the said tender Venkateshwara Enterprises and Swarna Industries participated. After negotiating, on 29.10.2010, price was fixed at Rs. 10,450/-, for each sewing machine. Hence the Chief Officer, CMC; placed order as per Ex.P-14, for supply of 95 sewing machines. Contrary to the conditions of Ex.P-14 /order, instead of supplying Fashion maker sewing machines, they supplied 95 sewing machines of Usha company. In that regard the bill, Ex.P-15, was issued by Swarna industries. Ex.P-

16 is also tender notification. Fixing the price at Rs. 10450/-, on 11.3.2010, for 95 sewing machines ,order was placed as per Ex.P-17. For receiving 95 sewing machines to the stock register, the Chief Officer has not signed the document. (1)Ramdas (2) J.Shivaprakash, (3) Nazeer Ahemmad, (4) MadhuSudhan and (5) P.K. Rajesh; were involved in the misappropriation of funds in purchasing Usha sewing machines.

14. DGO-1/ DW-1 and DGO-2/DW-2, in their separate evidence, have deposed in accordance with the contentions taken by them in their written statements. Ex.D-1 is the note sheets. Approval is Ex.D-2. The 3rd party inspection report is Ex.D-3. The letter issued by Lenova India Pvt., Ltd., to CMC Kolar is Ex.D-4. Ex.D-5 is invoice of Swarna Industries and comments, dated 24.10.2016, of DGO-1 is Ex.D-6. Through DGO-2, Ex.D-7, ie., the comments filed by DGO-2 was marked.

15. It is the specific allegation that 38 computers were purchased, violating the provisions of KTPP Act, Government orders, Rules of Office Hand Book and excess payment of Rs. 63,270/-, was made while purchasing the computers.

16. With regard to violation of provisions of KTPP Act by the DGO.s No.1 to 3; on careful perusal of Ex.D-1, the office note sheets, it clearly shows, at para -1, that tender is to be called and the file is to be sent to technical wing. Even the CAO, in para -2, has also noted that KTPP Provisions and Rules of 2000 are to be complied with; including calling for tender with regard to purchase of sewing machines. Here the

DGO.s-1 to 3 are Community Organizer, Office Manager and the SDA. They have clearly noted the requirements.

17. Further it is deposed by PW-2 and stated in Ex.P-4, mahazar and Ex.P-9, investigation report; that since M/s Hertz computer and Networks was not the authorized dealer of Lenova India pvt., Ltd., violating the Government order, order was placed to M/s Hertz computer and Networks, for supply of computers. Even though it is stated so, in para -8.05 of the said Investigation report it is also clearly stated that as per Government order, dated 13.10.2009, the computers and its related materials can be purchased from the authorized dealers. Further DW-1 and 2 have deposed that they did not note that the same are to be purchased from M/s Hertz computer and Networks. However, Ex.P 10, letter, dated 15.12.2009, of Assistant Director (s)/ Section Officer Deputy Director issued to Power net Solutions Pvt., Ltd., shows the specifications and prices fixed which are approved by the Government in respect of computers and related materials and the same is found in the order for supply of computers, Ex.P-9, showing at reference No. 2, as Lenova India pvt., Ltd.,- DGS and DRC letter, dated 17.2.2009. Therefore, even without calling the tender, order can be placed as per DGS and DRC rate to the authorized dealer.

18. It is the contention of the DGO.s-1 and 2 that M/s Hertz computer and Networks was the authorized dealer of Lenova India pvt., Ltd. Ex.D-4, letter written by Lenova India pvt., Ltd., to the Chief Officer, CMC, Kolar; shows that M/s Hertz computer and Networks is authorized to resell Lenova think range products through DGS and D rate

contract. Therefore, it cannot be considered that there was violation of Provisions of KTPP Act and violation of Government order.

19. Now, it is to be seen whether the DGO.s have violated the Rules No. 18 and 21 of Office Hand Book. At the cost of repetition as discussed above as per Ex.D-1/ office note it is clearly stated that tender was to be called and KTPP Provisions were to be complied with. When those aspects were stated by DGO.s, in the office note; then it cannot be said that there was violation of Rules -18 and 21 of Office Hand Book.

20. With regard to excess payment of Rs.63,270/- for purchase of computers and related materials the reasons have been clearly stated in Ex.P-12 /investigation report and PW-2 has deposed to that effect.

21. Further Ex.P-8, the order of Deputy Commissioner, Kolar, dated 12.6.2009, states the pre -conditions for purchasing the sewing machines and the computers. Ex.P-9, order placing for supply of computers and related materials, shows what all the descriptions/specifications and prices fixed for purchasing the computer, etc. However, Ex.P-11, the invoice /cash bill for supplying the computers, etc., shows the first, second and fourth requirements/ conditions are not fully complied with. Therefore, certainly there was excess payment of Rs.63,270/- with regard to purchase of computers and related materials.

22. As per Ex.P-8, order of Deputy Commissioner, dated 12.6.2009, conditions are shown therein. Ex.P-13/16, tender notification, shows that Fashion maker sewing machine with ISI/ISO marks shall be

purchased and even while placing the orders, as per Ex.P-17, for supply 95 sewing machines it is clearly stated that Fashion maker sewing machine with ISI/ISO marks are to be supplied of Usha company. Whereas, Ex.P-15, cash/ credit bill of Swarna Industries, shows only 95 tailing machines of Usha make were supplied. But, in Ex.P-15/ cash bill it is not mentioned the specifications, or having ISI/ISO marks. Even Ex.P-15(a), the Chief Officer has not signed the same showing the said sewing machines were received to stock register.

23. With regard to purchase of sewing machines and violation of Rules 18 and 21 of Office Hand Book; in Ex.D-1, in para 30, with regard to payment to be made to Sunrise Enterprises DGO.s-1 and 2 have not signed the same, or there is no notes of DGO.s-1 and 2. Only DGO-3 has noted in para No. 30. But DGO-3 has not noted the sewing machines supplied were not in accordance with the orders placed for supply of the same. Even there is no written statement by DGO-3, since he has been placed exparte.

24. Hence, with regard to violation of KTPP Act, Government order and non compliance of Rules 18 and 21 of Office Hand Book absolutely the Disciplinary Authority has not proved the same, in any manner, against DGO-1 and 2. Even with regard to non compliance of Rules for purchasing fashion maker sewing machine with ISI/ ISO marks, absolutely no evidence against DGO.s- 1 and 2.

25. Hence, only with regard to excess payment of Rs. 63,270/- while purchasing the computer, etc., and non mentioning / non compliance of specifications shown in the order of placing of sewing

machine; DGO-3 has not noted the same in para -30 of Ex.D-1/ office note. Therefore, even with regard to purchase of sewing machines also there is no evidence against DGO.s-1 and 2.

26. However, there is no official note or document, is produced by Disciplinary Authority to show that for payment for supply of computers and its related materials, DGO-3 has noted the same, or prepared the office note.

27. In this case for excess payment of Rs.63,270/- with regard to purchase of computer DGO-3 alone is not responsible. Even his superior officer/ Chief Officer was also responsible for the same. However the said Chief Officer is not shown as DGO in this case. Hence, Point No.s 1 to 3 are answered accordingly.

28. Point No. 4: In view of the answers to points No. 1 to 3 the following

FINDINGS

The Disciplinary Authority has not proved the charges leveled against DGO. 1

The Disciplinary Authority has not proved the charges leveled against DGO. 2

The Disciplinary Authority has partly proved the charges leveled against DGO. 3.

Hence, this report is submitted to the Hon'ble Upalokayukta-1 for further action.

The date of retirement of DGO- 1 is 30.6.2024.

The date of retirement of DGO- 2 is 30.6.2025.

The date of retirement of DGO- 3 is not known.

17-5-24

(SHUBHAVEER.B)
Additional Registrar Enquiries-9
Karnataka Lokayukta, Bengaluru

List of witnesses examined on behalf of Disciplinary Authority

1 PW-1 Sri.K.V.Manjunath

2 PW- 2 Sri. H.R.Narayana Rao

List of documents marked on behalf of Disciplinary Authority

Ex.P-1 – Complaint, dated 28.8.2012, submitted by PW-1
Ex.P- 2 and 3 – Complaints in Form No.s 1 and 2, dated 28.8.2012, submitted by PW-1.
Ex.P-4 Mahazar, dated 13.2.2015.

Ex.P-5 Mahazar, dated 13.2.2015.

Ex.P-6 and 7- Photographs

Ex.P-8 – Official Memorandum, dated 12.6.2009, of Planning Director, District Urban Development Cell, Kolar.

Ex.p-9 – Supply Order, dated 22.2.2010, by Commissioner, City Municipality Kolar.

Ex.P-10 – Letter, dated 15.12.2009, of Assistant Director (S) /Section Officer, /Deputy Director, to Power net Solutions Pvt Ltd., Bengaluru.

Ex.P-11- Bill No. 192, dated 20.3.2010.

Ex.P-12 – Investigation report, dated 31.5.2016
Ex.P-13 –Notification of Tender, dated 10.12.2009.

Ex.P-14 –Order, dated 11.3.2010.

Ex.P-15 – Bill No. 12, dated 30.3.2010.

Ex.P-16- Notification of Tender, dated 10.12.2009.

Ex.P-17 -Order, dated 11.3.2010.

Ex.P-18 – Letter, dated 11.3.2010, of Planning Director, District Urban Development Cell, Kolar to M/s C.Byre Gowda, Kolar

Ex.P-19 – 3rd party inspection report about sewing machines

Ex.P-20 – Not marked

Ex.P-21 –Order, dated 11.3.2010, for supplying of Gym items.

List of witnesses examined on behalf of DGOs

DW- 1 –DGO-1/ Sri.J.Shivaprakash.
DW-2 – DGO-2/ Sri. Nazeer Ahammed.

List of documents marked on behalf of DGO

Ex.D-1 – Note sheet

Ex.D-2 –Post factor approval

Ex.D-3 – Letter, dated 3.4.2010, of Commissioner, City

Municipality, Kolar for 3rd party inspection

Ex.D-4 – Letter of authorization, dated 1.10.2009, of Lenovo India Pvt Ltd.,

Ex.D-5 – Bill No. 12, dated 30.3.2010.

Ex.D-6- comments of DGO-1, dated 24.10.2016
Ex.D-7 - comments of DGO-2, dated 24.10.2016

17.5.24

(SHUBHAVEER.B)
Additional Registrar Enquiries-9
Karnataka Lokayukta,
Bengaluru

# ಕರ್ನಾಟಕ ಸರ್ಕಾರ

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್–2/ಡಿಇ/149/2022/ಎ.ಆರ್.ಇ–9

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು–560001.
ದಿನಾಂಕ: 24ನೇ ಮೇ 2024.

## –:: ಶಿಫಾರಸ್ಸು ::–

ವಿಷಯ: ಆಪಾದಿತ ಸರ್ಕಾರಿ ನೌಕರರಾದ (1) ಶ್ರೀ ಜೆ. ಶಿವಪ್ರಕಾಶ್, ಸಮುದಾಯ ಸಂಘಟನಾಧಿಕಾರಿ, ನಗರಸಭೆ, ಕೋಲಾರ, (2) ಶ್ರೀ. ನಜೀರ್ ಅಹಮದ್, ಹಿಂದಿನ ಮ್ಯಾನೇಜರ್, ನಗರಸಭೆ, ಕೋಲಾರ ಮತ್ತು (3) ಶ್ರೀ ಕೆ. ವೆಂಕಟರಮಣ, ಹಿಂದಿನ ದ್ವಿತೀಯ ದರ್ಜೆ ಸಹಾಯಕರು, ನಗರಸಭೆ, ಕೋಲಾರ ರವರುಗಳ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

ಉಲ್ಲೇಖ:(1) ಸರ್ಕಾರದ ಆದೇಶ ಸಂಖ್ಯೆ: ನಅಇ 35 ಡಿಎಂಕೆ 2017 ಬೆಂಗಳೂರು ದಿನಾಂಕ: 04/03/2022.

(2) ಉಪಲೋಕಾಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರು ರವರ ನಾಮ ನಿರ್ದೇಶನ ಆದೇಶ ಸಂಖ್ಯೆ: ಉಪಲೋಕ್–2/ಡಿಇ/149/2022, ಬೆಂಗಳೂರು, ದಿನಾಂಕ: 05/07/2022.

(3) ಅಪರ ನಿಬಂಧಕರು ವಿಚಾರಣೆಗಳು–9, ಕರ್ನಾಟಕ ಲೋಕಾಯುಕ್ತ ಬೆಂಗಳೂರು ರವರ ವಿಚಾರಣಾ ವರದಿ ದಿನಾಂಕ: 17/05/2024.

*****

ಸರ್ಕಾರದ ಆದೇಶ ದಿನಾಂಕ: 04/03/2022 ರಂತೆ (1) ಶ್ರೀ ಜೆ. ಶಿವಪ್ರಕಾಶ್, ಸಮುದಾಯ ಸಂಘಟನಾಧಿಕಾರಿ, ನಗರಸಭೆ, ಕೋಲಾರ, (2) ಶ್ರೀ. ನಜೀರ್ ಅಹಮದ್, ಹಿಂದಿನ ಮ್ಯಾನೇಜರ್, ನಗರಸಭೆ, ಕೋಲಾರ ಮತ್ತು (3) ಶ್ರೀ ಕೆ. ವೆಂಕಟರಮಣ, ಹಿಂದಿನ ದ್ವಿತೀಯ ದರ್ಜೆ ಸಹಾಯಕರು,

ನಗರಸಭೆ, ಕೋಲಾರ ರವರುಗಳ (ಇನ್ನು ಮುಂದೆ ಆಪಾದಿತ ಸರ್ಕಾರಿ ನೌಕರರು 1 ರಿಂದ 3 ಅಂದರೆ ಚಿಕ್ಕದಾಗಿ 'ಆ.ಸ.ನೌಕರರು 1 ರಿಂದ 3' ಎಂದು ಸಂಭೋದಿಸಲಾಗುವುದು) ವಿರುದ್ಧ ಶಿಸ್ತು ಪ್ರಕ್ರಿಯೆಯನ್ನು ಕೈಗೊಂಡು ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಈ ಸಂಸ್ಥೆಗೆ ಇಲಾಖಾ ವಿಚಾರಣೆಯನ್ನು ವಹಿಸಿರುತ್ತದೆ.

2. ಈ ಸಂಸ್ಥೆಯ ನಾಮನಿರ್ದೇಶನ ಆದೇಶ ಸಂಖ್ಯೆ: ಉಪಲೋಕ್-2/ಡಿಇ/149/2022, ಬೆಂಗಳೂರು, ದಿನಾಂಕ: 05/07/2022ರ ರೀತ್ಯಾ ಅಪರ ನಿಬಂಧಕರು ವಿಚಾರಣೆಗಳು-9 ರವರಿಗೆ ಆ.ಸ.ನೌಕರರುಗಳ ವಿರುದ್ಧ ದೋಷಾರೋಪಣಾ ಪಟ್ಟಿ ತಯಾರು ಮಾಡಿ, ವಿಚಾರಣೆ ನಡೆಸಿ, ವರದಿ ಸಲ್ಲಿಸುವಂತೆ ಆದೇಶ ಹೊರಡಿಸಲಾಗಿರುತ್ತದೆ.

3. ಆ.ಸ.ನೌ (1) ಶ್ರೀ ಜೆ. ಶಿವಪ್ರಕಾಶ್, ಸಮುದಾಯ ಸಂಘಟನಾಧಿಕಾರಿ, ನಗರಸಭೆ, ಕೋಲಾರ, (2) ಶ್ರೀ. ನಜೀರ್ ಅಹಮದ್, ಹಿಂದಿನ ಮ್ಯಾನೇಜರ್, ನಗರಸಭೆ, ಕೋಲಾರ ಮತ್ತು (3) ಶ್ರೀ ಕೆ. ವೆಂಕಟರಮಣ, ಹಿಂದಿನ ದ್ವಿತೀಯ ದರ್ಜೆ ಸಹಾಯಕರು, ನಗರಸಭೆ, ಕೋಲಾರ ರವರುಗಳ ವಿರುದ್ಧ ಈ ಕೆಳಗಿನ ದೋಷಾರೋಪಣೆಗಾಗಿ ಇಲಾಖಾ ವಿಚಾರಣೆಯನ್ನು ನಡೆಸಲಾಯಿತು.

## ANNEXURE No.I
## CHARGE

1 ರಿಂದ 3ನೇ ಆಸನೌ ಆದ ನೀವು –

1)2007–08, 2008–09, 2009–10ನೇ ಸಾಲಿನ ಅನುಮೋದಿತ ಕ್ರಿಯಾ ಯೋಜನೆಯಂತೆ ದಿ. 22.02.2010ರ ಸರಬರಾಜು ಆದೇಶದ ಮೇರೆಗೆ M/s. HERTZ Computer & NETWORKS, BANGALORE ಇವರಿಂದ 38 ಗಣಕಯಂತ್ರ ಹಾಗೂ ಅದಕ್ಕೆ ಸಂಬಂಧಿಸಿದ ಪರಿಕರಗಳನ್ನು ಖರೀದಿಸುವಾಗ ಕೆ.ಟಿ.ಪಿ.ಪಿ. ಕಾಯ್ದೆಯಲ್ಲಿ ಹೇಳಿದ ನಿಯಮಗಳನ್ನು ಪಾಲಿಸದೆ ಹಾಗೂ ಸರ್ಕಾರಿ ಆದೇಶ PWD/513/FC-iii-2001 ದಿ. 29.10.2001ರ ಆದೇಶವನ್ನು ಉಲಂಘಿಸಿ, ಖರೀದಿ ನಿಯಮಗಳನ್ನು ಪಾಲಿಸದೇ ಖರೀದಿಸಿದಲ್ಲದೇ ಕಛೇರಿ ಕೈಪಿಡಿ ನಿಯಮ 18 ಮತ್ತು 21ನ್ನು ಪಾಲಿಸದೇ ಕರ್ತವ್ಯಲೋಪವೆಸಗಿರುತ್ತೀರಿ.

2) ಮೇಲೆ ಹೇಳಿದ ಕಂಪ್ಯೂಟರ್ ಖರೀದಿ ಮಾಡುವ ಸಲುವಾಗಿ ಹಣ ಪಾವತಿ ಮಾಡುವಾಗ ರೂ.63,270/– ಗಳನ್ನು ಹೆಚ್ಚುವರಿ ಮಾಡಿ ಸಾಮೂಹಿಕ ಜವಾಬ್ದಾರರಾಗಿರುತ್ತೀರಿ.

3) 1 ರಿಂದ 3ನೇ ಆಸನೌ– ಆದ ನೀವು 2007–08ನೇ ಸಾಲಿನ ಎಸ್.ಎಫ್.ಸಿ ಯೋಜನೆ ಅಡಿಯಲ್ಲಿ ಶೇ. 18ರ ಮೀಸಲಾತಿಯಂತ ISI/ISO Mark ಪ್ಯಾಷನ್ ಮೇಕರ್ ಹೊಲಿಗೆಯಂತ್ರಗಳನ್ನು ಸನ್‌ರೈಸ್ ಎಂಟರ್‌ಪ್ರೈಸಸ್ ಮತ್ತು ಸ್ವರ್ಣ ಇಂಡಸ್ಟ್ರೀಸ್ ಟಮಕ ಇವರಿಂದ ಖರೀದಿ ಮಾಡುವಾಗ ಖರೀದಿ ನಿಯಮಗಳನ್ನು ಪಾಲನೇ ಮಾಡದೆ ಮತ್ತು ಕಛೇರಿ ಕೈಪಿಡಿ ನಿಯಮ 18 ಮತ್ತು 21ನ್ನು ಪಾಲಿಸದೇ ಕರ್ತವ್ಯಲೋಪವೆಸಗಿರುತ್ತೀರಿ.

ಆದ್ದರಿಂದ, ನೀವು ಕರ್ತವ್ಯಲೋಪವೆಸಗಿ ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (i) ರಿಂದ (iii) ರಡಿಯಲ್ಲಿ ದುರ್ನಡತೆಯನ್ನೆಸಗಿದ್ದೀರಿ.

4. ವಿಚಾರಣಾಧಿಕಾರಿಗಳು (ಅಪರ ನಿಬಂಧಕರು ವಿಚಾರಣೆಗಳು–9), ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಮೌಖಿಕ ಮತ್ತು ದಾಖಲಾತಿಗಳ ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಆ.ಸ.ನೌಕರರು (1) ಶ್ರೀ ಜೆ. ಶಿವಪ್ರಕಾಶ್, ಸಮುದಾಯ ಸಂಘಟನಾಧಿಕಾರಿ, ನಗರಸಭೆ, ಕೋಲಾರ ಮತ್ತು (2) ಶ್ರೀ. ನಜೀರ್ ಅಹಮದ್, ಹಿಂದಿನ ಮ್ಯಾನೇಜರ್, ನಗರಸಭೆ, ಕೋಲಾರ ರವರುಗಳ ವಿರುದ್ಧ ಮೇಲ್ಕಾಣಿಸಿದ ದೋಷಾರೋಪಣೆಯನ್ನು ರುಜುವಾತುಪಡಿಸುವಲ್ಲಿ ಶಿಸ್ತು ಪ್ರಾಧಿಕಾರವು **'ವಿಫಲವಾಗಿರುತ್ತದೆ'** ಎಂದು ಅಭಿಪ್ರಾಯಿಸಿದ್ದಾರೆ. ಆ.ಸ.ನೌಕರ

5. ಆ.ಸ.ನೌಕರ (3) ಶ್ರೀ ಕೆ. ವೆಂಕಟರಮಣ, ಹಿಂದಿನ ದ್ವಿತೀಯ ದರ್ಜೆ ಸಹಾಯಕರು, ನಗರಸಭೆ, ಕೋಲಾರ ರವರ ವಿರುದ್ಧ ಮೇಲ್ಕಾಣಿಸಿದ ದೋಷಾರೋಪಣೆಯನ್ನು ರುಜುವಾತುಪಡಿಸುವಲ್ಲಿ ಶಿಸ್ತು ಪ್ರಾಧಿಕಾರವು **ಭಾಗಶಃ ಸಫಲವಾಗಿರುತ್ತದೆ** ಎಂದು ಅಭಿಪ್ರಾಯಿಸಿದ್ದಾರೆ.

6. ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಪರಿಶೀಲಿಸಲಾಗಿ, ವಿಚಾರಣಾಧಿಕಾರಿಗಳು ಆ.ಸ.ನೌಕರರುಗಳ ವಿರುದ್ಧ ದೋಷಾರೋಪಣೆಯನ್ನು ರುಜುವಾತುಪಡಿಸಲು ಇಬ್ಬರು ಸಾಕ್ಷಿಗಳನ್ನು ಅಂದರೆ

ಪಿ.ಡಬ್ಲ್ಯೂ–1 ಮತ್ತು ಪಿ.ಡಬ್ಲ್ಯೂ–2 ರವರನ್ನು ವಿಚಾರಣೆಗೆ ಒಳಪಡಿಸಿ ಹಾಗೂ ನಿಶಾನೆ ಪಿ–1 ರಿಂದ ನಿಶಾನೆ ಪಿ–21 ದಾಖಲಾತಿಗಳನ್ನು ಗುರುತಿಸಲಾಗಿದೆ. ಆ.ಸ.ನೌಕರರುಗಳ ಪರವಾಗಿ ಆಪಾದಿತ ಸರ್ಕಾರಿ ನೌಕರರು 1 ಮತ್ತು 2 ರವರು ಸ್ವತ: ತಾವೇ ಸಾಕ್ಷಿಗಳಾಗಿ ಅಂದರೆ ಡಿ.ಡಬ್ಲ್ಯೂ–1 ಮತ್ತು ಡಿ.ಡಬ್ಲ್ಯೂ–2 ಸಾಕ್ಷಿಗಳಾಗಿ ವಿಚಾರಣೆಗೆ ಒಳಪಡಿಸಿಕೊಂಡು ನಿಶಾನೆ ಡಿ–1 ರಿಂದ ನಿಶಾನೆ ಡಿ–7 ರ ವರೆಗಿನ ದಾಖಲಾತಿಗಳನ್ನು ಗುರುತಿಸಲಾಗಿದೆ.

7. ಆ.ಸ.ನೌಕರರುಗಳ ವಿರುದ್ಧ ಆಪಾದಿಸಿದ ಆರೋಪಗಳ ಬಗ್ಗೆ ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿ ಹಾಗೂ ಅದಕ್ಕೆ ಪೂರಕವಾಗಿ ಸಲ್ಲಿಸಿರುವ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಹಸ್ತಕ್ಷೇಪ ಮಾಡಲು ಯಾವುದೇ ಸಕಾರಣಗಳು ಕಂಡುಬಂದಿರುವುದಿಲ್ಲ. ಆದ್ದರಿಂದ, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಅಂಗೀಕರಿಸಿ, ಆ.ಸ.ನೌಕರರು (1) ಶ್ರೀ ಜೆ. ಶಿವಪ್ರಕಾಶ್, ಸಮುದಾಯ ಸಂಘಟನಾಧಿಕಾರಿ, ನಗರಸಭೆ, ಕೋಲಾರ ಮತ್ತು (2) ಶ್ರೀ. ನಜೀರ್ ಅಹಮದ್, ಹಿಂದಿನ ಮ್ಯಾನೇಜರ್, ನಗರಸಭೆ, ಕೋಲಾರ ರವರುಗಳ ವಿರುದ್ಧ ಹೊರಿಸಲಾದ ಆರೋಪಗಳಿಂದ **'ದೋಷಮುಕ್ತಗೊಳಿಸಲು'** ಈ ಮೂಲಕ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ.

8. ಆ.ಸ.ನೌಕರ (3) ಶ್ರೀ ಕೆ. ವೆಂಕಟರಮಣ, ಹಿಂದಿನ ದ್ವಿತೀಯ ದರ್ಜೆ ಸಹಾಯಕರು, ನಗರಸಭೆ, ಕೋಲಾರ ರವರ ವಿರುದ್ಧ ಸಾಭೀತಾಗಿರುವ ಆರೋಪದ ಸ್ವರೂಪವನ್ನು ಹಾಗೂ ಸಂದರ್ಭಗಳ ಸಂಪೂರ್ಣತೆಯನ್ನು ಪರಿಗಣಿಸಿ, ಆರೋಪಗಳನ್ನು ರುಜುವಾತುಪಡಿಸುವಲ್ಲಿ ಶಿಸ್ತು ಪ್ರಾಧಿಕಾರವು **'ಭಾಗಶ: ಸಫಲವಾಗಿರುತ್ತದೆ'** ಎಂದು ನಿರ್ಣಯಿಸಿದೆ:–

9. ಆ.ಸ.ನೌಕರರ ಶ್ರೀ ಕೆ. ವೆಂಕಟರಮಣ, ಹಿಂದಿನ ದ್ವಿತೀಯ ದರ್ಜೆ ಸಹಾಯಕರು, ನಗರಸಭೆ, ಕೋಲಾರ ಪ್ರಥಮ ಮೌಖಿಕ ಹೇಳಿಕೆಯ ಪ್ರಕಾರ ವಿಚಾರಣಾಧಿಕಾರಿಗಳು ಸಲ್ಲಿಸಿರುವ ಮಾಹಿತಿಯಂತೆ, ದಿನಾಂಕ: 31/08/2043 ರಂದು ನಿವೃತ್ತಿ ಹೊಂದುವವರಿದ್ದಾರೆ.

'ಆ.ಸ.ನೌಕರರಾದ ಶ್ರೀ. ಕೆ. ವೆಂಕಟರಮಣ, ಹಿಂದಿನ ದ್ವಿತೀಯ ದರ್ಜೆ ಸಹಾಯಕರು, ನಗರಸಭೆ, ಕೋಲಾರ ರವರಿಗೆ ಮುಂದಿನ ಮೂರು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಹಿಡಿಯುವ ದಂಡನೆಯನ್ನು ವಿಧಿಸಬಹುದೆಂದು ಸರ್ಕಾರದ ವಿವೇಚನೆಗೆ ಶಿಫಾರಸ್ಸು ಮಾಡಿದೆ'.

10. ಸದರಿ ವಿಷಯದಲ್ಲಿ ತೆಗೆದುಕೊಂಡ ಕ್ರಮವನ್ನು ಈ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

ಸಂಬಂಧಪಟ್ಟ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿದೆ.

24/5/24

**(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)**
ಉಪಲೋಕಾಯುಕ್ತ-1,
ಕರ್ನಾಟಕ ರಾಜ್ಯ.